RAMAIAH INSTITUTE OF BUSINESS STUDIES
LIBRARY
BANGALORE-54

SE – 005

# First Semester B.Com. Examination, January/February 2026
## (SEP – 2025) (Freshers)
## ಕನ್ನಡ ಭಾಷಾ ಪತ್ರ
## ವಾಣಿಜ್ಯ ಕನ್ನಡ – 1

Time : 3 Hours Max. Marks : 80

I. ಆರು ಪ್ರಶ್ನೆಗಳಿಗೆ ಉತ್ತರಿಸಿ. (**40** ಪದಗಳಿಗೆ ಮೀರದಂತೆ) **(6×2=12)**

1) ನಾಗೇಂದ್ರನನ್ನು ನಿರೂಪಕರು ಮನೆಗೆ ಹೇಗೆ ಕರೆದುಕೊಂಡು ಬಂದರು ?
2) ಪೋರ್‌ಬಂದರಿನ ಬಗ್ಗೆ ಕಸ್ತೂರ್‌ಬಾ ಹೇಳುವುದೇನು ?
3) ಶಂಕರನ ಮಾನಸಿಕ ತೊಳಲಾಟಕ್ಕೆ ಕಾರಣವೇನು ?
4) ಸಿದ್ದ ಕಣ್ಮರೆಯಾದಾಗ ತಂದೆ ರಾಮಯ್ಯನ ಮನಸ್ಥಿತಿ ಏನು ?
5) ತಾಯಿ ಪಕ್ಕದ ಮನೆ ಕಾಂಪೌಂಡಿನಿಂದಾಚೆ ಯಾವ ಮಾತನ್ನು ಹಾರಿಸ್ತಾಳೆ ?
6) ಭೂಮಿ ನಡುಗಿಸುವಂತೆ ಆಚೀಚೆ ಏನು ಓಡಾಡುತ್ತದೆ ?
7) ಯೇಸು ಮನಸ್ಸಿನಲ್ಲಿ ಏನೆಂದು ಪ್ರಾರ್ಥಿಸಿದರು ?
8) ಕಿಸಾಗೋತಮಿಯ ರೋದನಕ್ಕೆ ಕಾರಣವೇನು ?

II. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. (**80** ಪದಗಳಿಗೆ ಮೀರದಂತೆ) **(4×5=20)**

1) ಮಗುವಿನ ಅಂದವನ್ನು ಜನಪದರು ಹೇಗೆ ವರ್ಣಿಸಿದ್ದಾರೆ ?
2) ನಾಗೇಂದ್ರನಿಗೆ ಹುಚ್ಚು ಹಿಡಿದಿದೆ ಎಂದು ಹೆತ್ತವರು ಹೇಗೆ ಭಾವಿಸಿದರು ?
3) ಹೊನ್ನಮ್ಮನ ವ್ಯಕ್ತಿತ್ವವನ್ನು ಪರಿಚಯಿಸಿ.
4) ಗಂಗನ ಹೊಲ ಅನ್ಯರ ಪಾಲಾದದ್ದು ಹೇಗೆ ?
5) ಹೊಟ್ಟೆ ಉರಿಸುವ ಪ್ರಸಂಗಗಳಾವುವು ?
6) ಶ್ರೀರಾಮನ ಮದುವೆಯ ಸಿದ್ಧತೆಯು ಹೇಗೆ ನಡೆಯುತ್ತಿತ್ತು ?

III. ಮೂರು ಪ್ರಶ್ನೆಗಳಿಗೆ ಉತ್ತರಿಸಿ. (**160** ಪದಗಳಿಗೆ ಮೀರದಂತೆ) **(3×10=30)**

1) 'ಸಮಸ್ಯೆಯ ಮಗು' ಕಥೆಯ ಆಶಯವನ್ನು ವಿವರಿಸಿ.
2) ತನ್ನ ಮಾವ-ಅತ್ತೆಯ ಕುರಿತು ಕಸ್ತೂರ್‌ಬಾ ಹೇಳುವ ವಿಚಾರಗಳೇನು ?

**P.T.O.**

Scanned with OKEN Scanner

LIBRARY
BANGALORE-54

3) 'ಮಣ್ಣಿನ ಮಗ' ಕಥೆಯ ಆಶಯವನ್ನು ವಿವರಿಸಿ.

4) 'ನೆರೆಕರೆ ಹಾರೈಕೆಗಳು' ಪ್ರಬಂಧದ ಆಶಯವೇನು ? ಚರ್ಚಿಸಿ.

5) 'ಪಾಪ ಪ್ರಾಯಶ್ಚಿತ್ತದಿಂದ ತೊಳೆದು ಹೋಗುತ್ತದೆ' ಈ ಹೇಳಿಕೆ ಮೇರಿಯ ವಿಷಯದಲ್ಲಿ ಹೇಗೆ ನಿಜವಾಯಿತು ? ವಿಶ್ಲೇಷಿಸಿ.

IV. 'ವ್ಯಾಸಂಗ ಪ್ರಮಾಣಪತ್ರ' ಪಡೆಯಲು ನಿಮ್ಮ ಪ್ರಾಂಶುಪಾಲರಿಗೊಂದು ಅರ್ಜಿ ಬರೆಯಿರಿ. **(1×5=5)**

V. ನಿಮ್ಮ ಕಾಲೇಜಿನಲ್ಲಿ ಜರುಗಿದ ಅಂತರ್‌ಕಾಲೇಜು ಕಬಡ್ಡಿ ಪಂದ್ಯಾವಳಿಯನ್ನು ಕುರಿತು ವರದಿಯನ್ನು ರಚಿಸಿ. **(1×5=5)**

VI. ಈ ಕೆಳಗಿನ ಲೇಖನದ ಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆಯನ್ನು ಬರೆಯಿರಿ. **(1×4=4)**

ನಾನು ಮಿಡಲ್‌ಸ್ಕೂಲ್ ನಾಲ್ಕನೇ ಕ್ಲಾಸಿಗೆ ಬರುವ ಹೊತ್ತಿಗೆ ಕನ್ನಡ ಪುಸ್ತಕಗಳನ್ನು ಓದುವ ಅಭ್ಯಾಸ ಕಾಯಿಲೆ ಎನ್ನುವಷ್ಟು ಬಲವಾಗಿ ಹಿಡಿದು ಬಿಟ್ಟಿತ್ತು. ನಮ್ಮ ಮನೆಯಲ್ಲಿ ರಾಶಿ ರಾಶಿ ಪುಸ್ತಕಗಳಿದ್ದವು. ಅಲ್ಲದೆ ಕನ್ನಡದ ಎಲ್ಲ ಲೇಖಕರ ಪುಸ್ತಕಗಳ ಗೌರವ ಪ್ರತಿಗಳೂ ಪ್ರಕಟವಾದ ಕೂಡಲೆ ಅಣ್ಣನ ಅವಗಾಹನೆಗಾಗಿ ಬರುತ್ತಿದ್ದವು. ಅವನ್ನೆಲ್ಲಾ ಯಾವುದು ಏನೆಂದೂ ನೋಡದೆ ನಾನು ತಗೊಂಡು ಮನೆಯ ಯಾವುದೋ ಮೂಲೆಯಲ್ಲಿ ಓದುತ್ತ ಕುಳಿತುಬಿಡುತ್ತಿದ್ದೆ. ಇಹಪರದ ಪರಿವೆಯೇ ಇಲ್ಲದೆ ಓದುತ್ತ ಕುಳಿತಿರುತ್ತಿದ್ದ ನನ್ನನ್ನು ಅಮ್ಮ ಹುಡುಕಿ ಎಬ್ಬಿಸಿ ಊಟಕ್ಕೆ ಕಳಿಸುತ್ತಿದ್ದರು. ಆಗೊಮ್ಮೆ ನನಗೆ ಕಾನೂರು ಹೆಗ್ಗಡತಿ ಸಿಕ್ಕಿತು. ಅದು ಕೂಡಲಿ ಚಿದಂಬರಂ ಅವರ ಕಾವ್ಯಾಲಯ ಪ್ರಕಾಶನದಿಂದ ನಾಲ್ಕು ಭಾಗಗಳಲ್ಲಿ ಪ್ರಕಟವಾಗಿತ್ತು. ಅದನ್ನು ಯಾರು ಬರೆದಿದ್ದು ಎಂದೂ ಸಹ ತಿಳಿಯದೆ ನಾನು ಓದತೊಡಗಿದೆ. ನಾನು ಆವರೆಗೂ ನಮ್ಮೂರು ಕುಪ್ಪಳ್ಳಿಯನ್ನು ನೋಡಿರಲಿಲ್ಲ. ಆದರೂ ಅದನ್ನು ಓದುತ್ತಾ ಹೋದಂತೆ ನನಗೆ ಏನೋ ಒಂದು ಆತ್ಮೀಯ ಪರಿಚಿತ ಪ್ರಪಂಚ ಹೊಕ್ಕಂತೆನಿಸಿತು. ಅದರ ಕೊನೆಯ ಭಾಗ ಸಿಕ್ಕದೆ ಚಡಪಡಿಸಿ ಮನೆಯೊಳಗಿದ್ದ ಪುಸ್ತಕಗಳನ್ನೆಲ್ಲಾ ಅಡಿಮೇಲು ಮಾಡುತ್ತಿದ್ದಾಗ ಅಮ್ಮ ನನಗೆ ''ಅದನ್ನು ನಿಮ್ಮಣ್ಣನೇ ಬರೆದಿದ್ದು ಕಣೋ'' ಎಂದು ಹೇಳಿದರು.

VII. ನಿಮಗೆ ಗೊತ್ತಿರುವ ನಾಲ್ಕು ಗಾದೆಗಳನ್ನು ಬರೆಯಿರಿ. **(1×4=4)**

---

Scanned with OKEN Scanner